ದಿನಾಂಕ 24.06.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿಯ ಪರ ಶ್ರೀ ಎನ್.ಎಸ್.ಎಸ್., ವಕೀಲರಿಂದಃ-

ಪ್ರತಿವಾದಿ ನನಗೆ ವೈಯಕ್ತಿಕವಾಗಿ ಪರಿಚಯವಿಲ್ಲ. ರಾಮನಗರ ತಾಲ್ಲೂಕಿನ ಬಿಡದಿ ಕಡೆ ನನಗೆ ಜಮೀನುಗಳ ವ್ಯವಹಾರ ಇಲ್ಲ. ಪ್ರತಿವಾದಿ ಎಲ್ಲಿ ವಾಸ ಮಾಡುತ್ತಾರೆಂದು ಅವರ ವಾಸದ ವಿಳಾಸ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಪ್ರತಿವಾದಿ ವಾಸವಿರುವ ತೋಟದ ಮನೆಯನ್ನು ನೀವು ನೋಡಿಲ್ಲ ಎಂದರೆ ಸಾಕ್ಷಿಯು ತೋಟದ ಮನೆ ನೋಡಿದ್ದೇನೆ ಎಂದು ನುಡಿಯುತ್ತಾರೆ. ಅದರ ನಂಬರ್ ನನಗೆ ಗೊತ್ತಿಲ್ಲ. ಕರಾರು ಪ್ರತಿವಾದಿ ಗಂಡ ಸಂಪಂಗಯ್ಯರವರ ಮುಖಾಂತರ ಆಯಿತು. ಯಾವ ಸನ್ನಿವೇಶದಲ್ಲಿ ಸಂಪಂಗಯ್ಯ ಪರಿಚಯ ಆದರು ಎಂದರೆ ಸಾಕ್ಷಿಯು ಅವರು ಜೋಳದ ವ್ಯಾಪಾರಕ್ಕೆ ಹೋಗುತ್ತಿದ್ದಾಗ ಪರಿಚಯ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಎಂತಹ ಸ್ವತ್ತು ಎಂದರೆ ಸಾಕ್ಷಿಯು ಲ್ಯಾಂಡ್ ಆದರೆ ಎಂತಹ ಸ್ವತ್ತು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದರ ನಂಬರ್ 51/1, 3 ಎಕರೆ 21 ಗುಂಟೆಯಲ್ಲಿ 2 ಗುಂಟೆಗೆ ಅಗ್ರಿಮೆಂಟ್ ಮಾಡಿಕೊಂಡಿದ್ದೇವೆ. 51 ರ ಸರ್ವೇ ನಂಬರ್‌ನ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ಅಗ್ರಿಮೆಂಟ್‌ಗೂ ಮುಂಚೆ ನಾನು ಇ.ಸಿ., ಮತ್ತು ಜಮೀನಿನ ಪತ್ರ ನೋಡಿದ್ದೆನು. ಇ.ಸಿ.,ಯಲ್ಲಿ ಅನಿತಾರವರಿಗೆ ದಾನದ ಬಗ್ಗೆ ನಮೂದು ಇತ್ತು. ಆ ಪತ್ರವನ್ನು ಪ್ರತಿವಾದಿ ನನಗೆ ತೋರಿಸಿ ವಾಪಸ್ ಪಡೆದುಕೊಂಡರು.

2. ಐದು ಗುಂಟೆಗಿಂತ ಕಡಿಮೆ ವ್ಯವಸಾಯದ ಜಮೀನು

ನೋಂದಣಿಯಾಗುವುದಿಲ್ಲ ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ಅಗ್ರಿಮೆಂಟ್ ಆದದ್ದು ದಿನಾಂಕ 16.06.2014 ರಲ್ಲಿ. ಅಗ್ರಿಮೆಂಟ್ ಬರವಣಿಗೆ ಯಾರು ಮಾಡಿದರೆ ಎಂದರೆ ಸಾಕ್ಷಿಯು ಅನಿತಾರವರ ಗಂಡ ಮಾಡಿಸಿಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಬರವಣಿಗೆ ಮಾಡಿದಾಗ ನಾನು ಸ್ಥಳದಲ್ಲಿರಲಿಲ್ಲ. ಅಗ್ರಿಮೆಂಟ್‌ನ ಸಾಕ್ಷಿದಾರರು ನನಗೆ ವೈಯಕ್ತಿಕವಾಗಿ ಪರಿಚಯವಿಲ್ಲ. ಅಗ್ರಿಮೆಂಟ್‌ನಲ್ಲಿ ಅಥವಾ ಬಾಯಿಮಾತಿನಲ್ಲಿ ಕ್ರಯಪತ್ರ ಮಾಡುವ ಬಗ್ಗೆ ಸಮಯ ನಿಗದಿಯಾಗಿತ್ತಾ ಎಂದರೆ ಸಾಕ್ಷಿಯು ಪೋಡಿಯಾಗಬೇಕೆಂದು ಮಾತುಕತೆಯಾಗಿತ್ತು ಎಂದು ನುಡಿಯುತ್ತಾರೆ. ಏತಕೆ ಪೋಡಿಯಾಗಬೇಕು, ಪೋಡಿ ಎಂದರೆ ಏನು ಎಂದರೆ ನನಗೆ ಗೊತ್ತಿಲ್ಲ.

3. ಮೂಲ ಸ್ವತ್ತಿನ ಮಾಲೀಕರು ಯಾರು ಎಂದು ನಾನು ತಿಳಿದುಕೊಂಡಿಲ್ಲ. ವಕೀಲರ ಬಳಿ ಅಥವಾ ಕಾನೂನು ತಿಳಿದವರ ಬಳಿ ದಾಖಲೆಗಳನ್ನು ತೋರಿಸಿ ಪರಿಶೀಲನೆ ಮಾಡಿಸಿಲ್ಲ. 3 ಎಕರೆ 21 ಗುಂಟೆಯ ಚಕ್ಕುಬಂದಿಯಲ್ಲಿ ಪೈಕಿ ಯಾವ ದಿಕ್ಕಿಗೆ 2 ಗುಂಟೆ ಎಂದು ವ್ಯವಹಾರ ಆಗಿದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. 3 ಎಕರೆ 21 ಗುಂಟೆ ಪೈಕಿ 2 ಗುಂಟೆಗೆ ಕೈ ನಕ್ಷೆ ಆಗಿಲ್ಲ. ಪ್ರತಿವಾದಿ ಸಲ್ಲಿಸಿರುವ ಲಿಖಿತ ತಕರಾರನ್ನು ನಾನು ಓದಿಸಿ ತಿಳಿದುಕೊಂಡಿಲ್ಲ.

4. ನಿಪಿ-1 ರ 2 ನೇ ಪುಟದಲ್ಲಿ ಕಾಲಂ ನಂ.11 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಎಸ್.ಎಲ್.ಪಿ ಸಿವಿಲ್ 1910/2012 ಹಾಗೂ ಮಾನ್ಯ ಉಚ್ಚ ನ್ಯಾಯಾಲಯ ಆರ್.ಎಫ್.ಎ 565/2006 ಎಂದು ನಮೂದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಹಣಿಯಲ್ಲಿ ಪೈಪ್ ಲೈನ್

ಹಾದುಹೋಗಿದೆ ಎಂದು ಬರೆದಿದೆ ಏನು ಹೇಳುತ್ತೀರಿ ಎಂದರೆ ಗೊತ್ತಿಲ್ಲ. ನಿಪಿ-1 ಪಹಣಿಯಲ್ಲಿ 25,000/- ರೂ ಸಾಲ ಪಡೆದಿರುವ ಬಗ್ಗೆ ನಮೂದಿದಾಗಿ ಅದು ಯಾರು ಎಂದು ಗೊತ್ತಿಲ್ಲ. ನಿಪಿ-1 ಸದರಿ ಪಹಣಿಯಲ್ಲಿ ಕಾಲಂ ನಂ.11 ರಲ್ಲಿ ರೆವಿನ್ಯೂ ನ್ಯಾಯಾಲಯದ ಕೇಸುಗಳ ಬಗ್ಗೆ ನಮೂದಾಗಿದೆ ಆ ಬಗ್ಗೆ ಸಹ ನನಗೆ ಗೊತ್ತಿಲ್ಲ.

5. ಸಂಪಂಗಯ್ಯನ ತಾಯಿ ಸಾಕಮ್ಮರವರನ್ನು ನಾನು ನೋಡಿಲ್ಲ. ಸದರಿ ಸಾಕಮ್ಮರವರು ಜೀವಂತ ಇದ್ದಾರಾ ಅಥವಾ ಇಲ್ಲ ಎಂದು ನನಗೆ ಗೊತ್ತಿಲ್ಲ. ಸಾಕಮ್ಮನ ಗಂಡ ನಿಂಗಯ್ಯ ಎಂಬುವವರು ಸಹ ನನಗೆ ಗೊತ್ತಿಲ್ಲ. ನಿಂಗಯ್ಯನವರು ಇಬ್ಬರು ಹೆಂಡತಿಯರು ಮತ್ತು ಅವರ ಮಕ್ಕಳಿಗೆ ಸರ್ವೇ ನಂ.51 ಮತ್ತು ಇತರೆ ಆಸ್ತಿಗಳ ಸಂಬಂಧ ವಿಲ್ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕಮ್ಮರವರು ಪ್ರಸ್ತುತ ದಾವಾ ಸ್ವತ್ತು ಹಾಗೂ ಇತರೆ ಸ್ವತ್ತಿನ ಸಂಬಂಧ ಓ.ಎಸ್ 192/1998 ದಾವೆಯನ್ನು ಹಕ್ಕು ಘೋಷಣೆ ಮತ್ತು ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ವಜಾಗೊಂಡಿದ್ದು, ಸದರಿ ತೀರ್ಪಿನ್ನು ಪ್ರಶ್ನಿಸಿ ಸಾಕಮ್ಮರವರು ಆರ್.ಎಫ್.ಎ 565/2006 ನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಾನ್ಯ ಉಚ್ಚ ನ್ಯಾಯಾಲಯವು ಅದನ್ನು ವಿಭಾಗದ ದಾವೆಯಾಗಿ ಪರಿವರ್ತಿಸಿ ಆದೇಶ ಮಾಡಿ, ಮೊದಲನೇ ಮತ್ತು ಎರಡನೇ ಹೆಂಡತಿ ಮಕ್ಕಳಿಗೆ ಹಿಸ್ಸಾ ಡಿಕ್ರಿ ಮಾಡಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ತೀರ್ಪಿನ್ನು ಪ್ರಶ್ನಿಸಿ ನರಸಮ್ಮ ಮತ್ತು ಆಕೆಯ 5 ಜನ ಮಕ್ಕಳು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದರು ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ಕೇಸುಗಳ ಬಗ್ಗೆ ಪರಿಶೀಲನೆ ಮಾಡದೇ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಾನು

ಅಗ್ರಿಮೆಂಟನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

6. ಮೇಲೆ ಹೇಳಿದ ಕೇಸುಗಳ ತೀರ್ಪುಗಳನ್ನು ಪಡೆದು ಯಾಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಮಗೆ ಕೇಸಿರುವುದು ಗೊತ್ತೇ ಇಲ್ಲ ಎಂದು ನುಡಿಯುತ್ತಾರೆ. ಪೂರ್ತಿ ಸ್ವತ್ತು ಸಾಕಮ್ಮನ ಮದುವೆಯ ಕಾಲಕ್ಕೆ ಆಕೆಯ ತಂದೆ ತಾಯಿ ಸಾಕಮ್ಮ ಮತ್ತು ಆಕೆಯ ಗಂಡನಿಗೆ ಕೊಟ್ಟ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ದಾನಪತ್ರ ಸಹ ಬರೆದುಕೊಟ್ಟಿದ್ದು ಅದನ್ನು ನೀವು ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ನಮಗೆ ಆ ಬಗ್ಗೆ ಏನೂ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ದಾವಾ ಸ್ವತ್ತಿನ ಮಾಲೀಕಳು ಅಲ್ಲ, ಅವರು ಮನೆಯ ಸೊಸೆ ಮಾತ್ರ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಅಗ್ರಿಮೆಂಟ್ ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನೀವು ಹಾಜರುಪಡಿಸಿರುವ ಕಂದಾಯ ದಾಖಲೆಗಳು ಪ್ರತಿವಾದಿಗೆ ಸಂಬಂಧಪಟ್ಟಿಲ್ಲ ಎಂದರೆ ಸಾಕ್ಷಿಯು ಇಲ್ಲಿಗೆ ಬಂದ ಮೇಲೆ ಗೊತ್ತಾಯಿತು ಎಂದು ನುಡಿಯುತ್ತಾರೆ.

7. ಪ್ರತಿವಾದಿ ನನಗೆ ಅಗ್ರಿಮೆಂಟ್ ಮಾಡಿಕೊಟ್ಟಿಲ್ಲ, ಒಂದೂವರೆ ಲಕ್ಷ ರೂಪಾಯಿ ಮುಂಗಡ ಹಣ ಪಡೆದುಕೊಂಡಿಲ್ಲ, ಪ್ರತಿವಾದಿ ಯಾರೆಂದು ನನಗೆ ಗೊತ್ತೇ ಇಲ್ಲ ಎಂದರೆ ಸರಿಯಲ್ಲ. ನಾನು ಒಂದೂವರೆ ಲಕ್ಷ ರೂಗಳನ್ನು ನಗದಾಗಿ ಕೊಟ್ಟಿದ್ದೇನೆ ಎಂದು ಹೇಳುವ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಅಗ್ರಿಮೆಂಟ್ ಬರೆದುಕೊಡುವ ಅಧಿಕಾರ ಇರಲಿಲ್ಲ, ಆಕೆಗೆ ಸ್ವತ್ತನ್ನು ವರ್ಗಾಯಿಸುವ ಹಕ್ಕು ಇರಲಿಲ್ಲ ಆದ್ದರಿಂದ ನಾನು ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.